International Journal of Kannada Research 2023; 9(4): 34-36

International Journal of Kannada Research
www.kannadajournal.com

**ISSN: 2454–5813**
IJKR 2023; 9(4): 34-36
© 2023 IJKR
www.kannadajournal.com
Received: 09-07-2023
Accepted: 15-09-2023

**ವೀರೇಶ ಟಿ.**
ಸಂಶೋಧನ ವಿದ್ಯಾರ್ಥಿ, ಡಾ. ಆರ್.ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಕರ್ನಾಟಕ, ಭಾರತ

**ವಾಮದೇವ ಎಚ್.ಟಿ.**
ಸಹಾಯಕ ಪ್ರಾಧ್ಯಾಪಕ ಮಾರ್ಗದರ್ಶಕರು, ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ, ಕರ್ನಾಟಕ, ಭಾರತ

**Corresponding Author:**
**ವೀರೇಶ ಟಿ.**
ಸಂಶೋಧನ ವಿದ್ಯಾರ್ಥಿ, ಡಾ. ಆರ್.ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಕರ್ನಾಟಕ, ಭಾರತ

# ಪ್ರಗತಿಶೀಲ ಕಥೆಗಳಲ್ಲಿ ಸಾಂಸ್ಕೃತಿಕ ಸಂಘರ್ಷ

**ವೀರೇಶ ಟಿ., ವಾಮದೇವ ಎಚ್.ಟಿ.**

**ಪೀಠಿಕೆ**

ಕರುನಾಡು ಎಂದ ತಕ್ಷಣ ಒಂದು ದೇಶ ಪ್ರದೇಶ ಪ್ರಾಂತ್ಯ ರಾಜ್ಯ ಜನಾಂಗ ಇತಿಹಾಸ ಧರ್ಮಕಲೆ ಶಿಲ್ಪ ನೆಲ ಜಲ ಹಾಗೂ ಜನರ ಒಟ್ಟು ಸಾಂಸ್ಕೃತಿಕ ವಿರಾಟಸ್ವರೂಪವು ಕಣ್ಣೆದುರಿಗೆ ಬರುತ್ತದೆ. ಅದಕ್ಕೆಂದೇ ರಾಷ್ಟ್ರ ಕವಿ ಕುವೆಂಪು ಅವರು ಕರ್ನಾಟಕಕ್ಕೆ 'ಮಂತ್ರ ಕಣಾ' ಶಕ್ತಿ ಕಣಾ ತಾಯಿ ಕಣಾ ದೇವಿ ಕಣಾ, ಎಂದು ಕೊಂಡಾಡಿದ್ದಾರೆ. ಕರುನಾಡು ಕರ್ನಾಟಕ ಮತ್ತು ಕನ್ನಡ ಈ ಮೂರರ ಸಾಕಾರ ರೂಪವೇ ಕನ್ನಡ ಸಾಹಿತ್ಯವಾಗಿದೆ, ಕನ್ನಡ ಸಾಹಿತ್ಯಕ್ಕೆ ತನ್ನದೇ ಆದ ಅಂತಃ ಸತ್ವವಿದೆ, ಪ್ರಾಚೀನ ಪರಂಪರೆಯಿದೆ. ಅದು ಭವ್ಯವಾದ ಮತ್ತು ಹಿರಿದಾದ ಮೌಲ್ಯಗಳನ್ನು ಮೈಗೂಡಿಸಿಕೊಂಡು ಉಳಿದಿದೆ, ಬೆಳೆದಿದೆ. ಸಂಸ್ಕೃತಿಯು ಮಹತ್ವದ ಅಂಶಗಳನ್ನು ಅರಗಿಸಿ, ಆಳವಹಿಸಿ ಮುಂದುವರೆಸಿಕೊಂಡು ಬಂದಿದೆ.

ಕವಿರಾಜ ಮಾರ್ಗದಲ್ಲಿ 'ಕಾವೇರಿಯಿಂದಲೂ ಗೋವಾವರಿವರ ಮರ್ದ ನಾಡದು ಕನ್ನಡ' ಎಂದು ಕನ್ನಡ ನಾಡಿನ ಚಾರಿತ್ರಿಕ ಭೌಗೋಳಿಕ ದಾಖಲೆ ಪಡಿಮೂಡಿದೆ. ನಾಡಷ್ಟೇ ಅಲ್ಲ, ನಾಡಿನ ಜನರ ಸ್ವಭಾವ, ವರ್ತನೆ ವ್ಯಕ್ತಿ ಸಾಧನೆಗಳ ಸಾಂಸ್ಕೃತಿಕ ಅಸ್ತಿತ್ವವನ್ನು ಕೂಡ ಈ ಕೃತಿಯು ಸಾಬೀತು ಪಡಿಸಿದೆ. ಕನ್ನಡ ಆದಿಕವಿ ಪಂಪನು ಬನವಾಸಿಯ ನೈಸರ್ಗಿಕ ಚೆಲುವನ್ನು ನಂದನ ವನಂಗಳೋಳ್ ಬನವಾಸಿ ದೇಶದೊಳ್' ಎಂದು ವರ್ಣಿಸುತ್ತ ಅರಂಕುಸಮಿಟ್ಟೊಡಂ ನೆನವುದೆನ್ನ ಮನಂ ಬನವಾಸಿ ದೇಶಮಂ' ಬಂದಿದ್ದಾನೆ. ಚಾಗದ ಬೋಗದ ಅಕ್ಕಂದ ಗೇಯದ ಗೊಟ್ಟಿಯ ಆಲಂಪಿನ ಇಂಪುಗಳ್ಗೆ ಅಗರಮಾನ ಮಾನಸರೆ ಮಾನಸರ್' ಎನ್ನುವಲ್ಲಿ ಕನ್ನಡಿಗರ ತ್ಯಾಗ ಬೋಗಗಳ ಸಮನ್ವಯ ದೃಷ್ಟಿಯನ್ನು ದಿಗ್ದರ್ಶಿಸಿದ್ದಾನೆ. ಅಂಡಯ್ಯ ಕವಿಯು ಕನ್ನಡಮೆಸಿಪ್ಪಾ ನಾಡು ಚೆಲ್ವಾಯ್ತು' ಎಂದು ಉದ್ಧರಿಸಿದ್ದಾನೆ. ಹೊರಬಹ ಶಾಸನವು 'ನಾನಾ ಮಹಿಮೆಯೊಳೆಸೆಗುಂ ಚಾರು ಕರ್ನಾಟಕದೇಶಂ' ಎಂದು ನಾಡಿನ ಚೆಲುವನ್ನು ಬಿತ್ತರಿಸಿದೆ. ಇನ್ನೊಂದು ಶಾಶನಂತೂ ಕರ್ನಾಟಕವು "ಬಹುಧರ್ಮ ಧೇನು ನಿವಹಕ್ಕಾಡುಂದೊಲಂ"[೧] ಎಂದಿದೆ.

ಬಿ.ಎಂ. ಶ್ರೀಯವರು ಏನು ಚೆಲುವಿನ ನಾಡು, ಚೆಲುವು ಚೆಲ್ಲುವ ನಾಡು, ಕನ್ನಡದ ನಾಡು' ಎಂದು ಏನು ಚಿನ್ನದ ನಾಡು ನಮ್ಮೊಲುಮೆಯ ನಾಡು, ನಮ್ಮಿನಿಯ ನಾಡು' ಎಂದು ಸಮಗ್ರ ಕರ್ನಾಟಕದ ಸಿರಿಯನ್ನು ತಮ್ಮದೊಂದು ಪದ್ಯದಲ್ಲಿ ಸೆರೆಹಿಡಿದಿದ್ದಾರೆ. ಚೆನ್ನವೀರ ಕಣವಿಯವರು 'ವಿಶ್ವಭಾರತೀಗೆ ಕನ್ನಡದಾರತಿ' ಎಂದಿದ್ದಾರೆ. ಕೆ.ಎಸ್. ನಿಸಾರ್ ಅಹ್ಮದ ಅವರು 'ಜೋಗದ ಸಿರಿ ಬೆಳಕಿನಲ್ಲಿ' ಎಂದು ನಾಡಿನ ನಿತ್ಯೋತ್ಸವದ ಗೀತೆಗಳನ್ನು ಹಾಡಿದ್ದಾರೆ. ಹೀಗೆ ಪ್ರಗತಿಶೀಲ ಸಾಹಿತ್ಯದ ಕವಿಗಳು ಕಾವ್ಯಕ್ಕೆ ನಾಡವರ ಬದುಕಿಗೆ ಕನ್ನಡನಾಡು ಸ್ಫೂರ್ತಿಯ ತಾಣವಾಗಿದೆ ಅಂತಹ ಹೇಳಬಹುದು.

ಸಾಮಾಜಿಕ ಕ್ರಾಂತಿ ವಿಶ್ಲೇಷಣಾತ್ಮಕ ಸಮಾಜವಾದದ ಪ್ರೇರಣಾತ್ಮಕ ಕೂಸು ಆಗುವಂತೆ ನೈತಿಕ ನೆಲೆಗಟ್ಟಿನ ಸಮತಾವಾದವು ಪ್ರಗತಿಶೀಲ ಸಾಹಿತ್ಯಕ್ಕೆ ಮೂಲಭೂತ ತಳಹದಿಯಾಗಿದೆ. ವಾಸ್ತವಿಕತೆಗೆ ಮಹತ್ವಕೊಟ್ಟು ಸಂಪ್ರದಾಯದ ಮೌಢ್ಯತೆಯನ್ನು ಕಿತ್ತೊಗೆಯಲು– ಪ್ರಯತ್ನಿಸಿತು. ಶ್ರಮಜೀವಿಗಳ ಹಿತರಕ್ಷಣೆಯೇ ಪ್ರಗತಿಶೀಲ ಸಾಹಿತ್ಯದ ಉಸಿರಾಗಿ ಪರಿಣಮಿಸಿತು. ಈ ಆಶಯದಿಂದ ಕೂಡಿರುವ ಪ್ರಗತಿಶೀಲ ಸಾಹಿತ್ಯ ಚಳುವಳಿಯ ಹಿನ್ನೆಲೆ, ಸ್ಥೂಲನೋಟ, ಮಾನವೀಯ ಚಿಂತನೆಗಳ ಹೂರಣವನ್ನು ಗ್ರಹಿಸಿಲಾಗಿದೆ. ಈ ಘಟ್ಟದ ಪ್ರಮುಖ ಲೇಖಕರಾದ ಅ.ನ.ಕೃ. ತ.ರಾ.ಸು. ಬಸವರಾಜ ಕಟ್ಟಿಮನಿ, ನಿರಂಜನ ಮುಂತಾದವರ ಲೇಖಕರಾದವರ ಜೀವನ ಸಾಧನೆ, ವ್ಯಕ್ತಿತ್ವ ಸಾಹಿತ್ಯ ಶ್ರೀಯನ್ನು ವಿಭಿನ್ನ ಆಯಾಮಗಳ ಮೂಲಕ ರಚಿಸಲಾಗಿದೆ.

ಪ್ರಗತಿಶೀಲ ಸಾಹಿತ್ಯದ ಉಪಯೋಗದಿಂದ ಲೇಖಕರು ಜನತೆಯ ಮನೋವಿಕಾಸಕ್ಕಾಗಿ ಸಾಹಿತ್ಯ ರಚನೆ ಮಾಡಿದರು, ವರ್ಗ ತಾರತಮ್ಯವನ್ನು ವಿರೋಧಿಸಿದರು. ಸಮಾಜದಲ್ಲಿನ ಅನ್ಯಾಯ, ಅನಾಚಾರ, ಕೌರ್ಯ, ದಬ್ಬಾಳಿಕೆ ದೌರ್ಜನ್ಯದ ವಿರುದ್ಧ ಸಿಡಿದೆದ್ದರು. ಸಮಾಜದಲ್ಲಿ ಶಾಂತಿ ನೆಲೆಸಲು ಕ್ರಾಂತಿ ಆಗಲೇಬೇಕು ಎಂದರು. ದುರ್ಬಲರ, ದಲಿತರ ಬಡವರ ಸ್ತ್ರೀಯರ ಪರವಾಗಿ ಸಾಹಿತ್ಯ ರಚನೆಗೆ ಒತ್ತು ಕೊಟ್ಟರು. ಸಮಾಜದಲ್ಲಿ ಹೊಟ್ಟೆ ಪಾಡಿಗಾಗಿ ವೇಶ್ಯಯರು ಅನುಭವಿಸುತ್ತಿದ್ದ ನೋವುಗಳನ್ನು ಸಾಹಿತ್ಯ ಕೃತಿಗಳ ಮೂಲಕ ತಿಳಿಸಿದರು. ಮನುಷ್ಯ ಸಂಬಂಧಗಳನ್ನು ಗಟ್ಟಿಗೊಳಿಸುವ ಅನಿವಾರ್ಯತೆ ಕುರಿತು ಎಚ್ಚರಿಸಿದರು. ಸಾಹಿತ್ಯದ ಮೂಲ ಗುರಿ ಆತ್ಮೋದ್ಧಾರವೆ ಹೊರತು ಮನರಂಜನೆ ಅಲ್ಲವೆಂದು ರಚಿಸಿದರು. "ಸಾಹಿತ್ಯ ವಾಸ್ತವಿಕತೆಗೆ ಮುಸುಕು ಹಾಕಬಾರದು, ಸಾಮಾಜಿಕ ಕ್ರಾಂತಿಯ ವಜ್ರಾಯುಧವಾಗಬೇಕು" ಎಂದರು. ಬಹಳ ಮುಖ್ಯವಾಗಿ ಹಸಿವಿನ ತುಡಿತ ಹೇಗಿರುತ್ತದೆ. ಎಂದು ಕಥೆ ಕಾದಂಬರಿಗಳ ಮೂಲಕ ಕಟ್ಟಿಕೊಟ್ಟರು, ಮಠಗಳಲ್ಲಿ, ದೇವಾಲಯಗಳಲ್ಲಿ, ಮನೆಗಳಲ್ಲಿ ಕಾರ್ಖಾನೆಗಳಲ್ಲಿ, ಹಳ್ಳಿಗಳಲ್ಲಿ ನಡೆಯುವ ಮೋಸ-ವಂಚನೆ ದುರಾಚಾರಗಳನ್ನು ಬರವಣಿಗೆಗಳ ಮೂಲಕ ಬಯಲಿಗೆಳೆದರು. ಕಾದಂಬರಿ ಮತ್ತು ಪ್ರಗತಿಶೀಲರ ಕಥೆಗಳಲ್ಲಿ ಓದುಗರಿಗೆ ದಕ್ಕಿದ ಅನುಭವ ಹೊಚ್ಚ ಹೊಸದು. ಪ್ರಗತಿಶೀಲರಿಂದ ಸಾಹಿತ್ಯದ ಭಾಷೆಗೆ ಹೊಸ ಕಸುವು (ಶಕ್ತಿ) ಬಂದಿತು. ಸಂಕೋತವನ್ನು ಬಿಟ್ಟು ಸನ್ನಿವೇಶಕ್ಕೆ ಅಗತ್ಯವಾದ ಪದಗಳನ್ನು

ಬಳಸುವ ಧೈರ್ಯ ಪ್ರಗತಿಶೀಲರದು.... ಪ್ರಗತಿಶೀಲರು ಸಾಹಿತ್ಯವನ್ನು ಕುರಿತ ಮೂಲಭೂತ ತತ್ವಗಳನ್ನು ಮತ್ತೆ ಪರೀಕ್ಷಿಸಿ ನೋಡುವುದನ್ನು ಅನಿವಾರ್ಯ ಮಾಡಿದರು. ಈ ರೀತಿಯಾಗಿ ಸಾಮಾಜಿಕ ಏಳಿಗೆಗೆ ತೊಡುಕಾದ ಜ್ವಲಂತ ಸಮಸ್ಯೆಗಳ ಕುರಿತು ಮನುಷ್ಯನ ಬಾಳನ್ನು ತಿಳಿಗೊಳಿಸುವ ಸಾಹಿತ್ಯ ಕೃಷಿ ನಡೆದಿದ್ದು ಪ್ರಗತಿಶೀಲರ ಜನಪ್ರಿಯತೆಗೆ ಕಾರಣವಾಯಿತು. ಹೊಸ ಆಲೋಚನೆಗಳನ್ನು ಹೊರದೇಶಿಯಿಂದ ಪಡೆದು ವಾಸ್ತವತಾವಾದದ ನೆಲೆಯಲ್ಲಿ ಸಾಹಿತ್ಯ ರಚನೆ ಕಟ್ಟಿಕೊಡುವುದನ್ನು ಪರಿಚಯಿಸಿದ ಕೀರ್ತಿ ಕನ್ನಡ ನೆಲದಲ್ಲಿ ಪ್ರಗತಿಶೀಲರಿಗೆ ಸಲ್ಲುತ್ತದೆ.

ನಮ್ಮ ದೇಶದಲ್ಲಿ ಬ್ರಿಟಿಷರ ಆಳ್ವಿಕೆಯ ಅಂತ್ಯ ಕಾಲದಲ್ಲಿ ಅನೇಕ ಸಾಮಾಜಿಕ ಸಮಸ್ಯೆಗಳು ತಲೆ ಎತ್ತಿದ್ದವು, ಬ್ರಿಟಿಷರು ಭಾರತೀಯರ ಸಂಪತ್ತನ್ನು ಲೂಟಿ ಮಾಡಿ ಹೊರದೇಶಗೆ ಸಾಗಿಸಿದರ ಪರಿಣಾಮದಿಂದ ಬಡತನ, ಅನಾರೋಗ್ಯ ವೇಶ್ಯಾವಾಟಿಕೆ ಶ್ರೀಮಂತರ ದಬ್ಬಾಳಿಕೆ ದೌರ್ಜನ್ಯ ನಡೆಯಲಾರಂಭಿಸಿತು. ಸಹಜವಾಗಿಯೇ ಈ ಎಲ್ಲಾ ವಿದ್ಯಮಾನಗಳು ಸಾಹಿತಿಗಳ ಮೇಲೆ ಪರಿಣಾಮ ಬಿರಿತು. ನವೋದಯ ಕಾಲದ ಶೃಂಗಾರಮಯ ಸ್ವಾತಂತ್ರ್ಯ ಹೋರಾಟದ ರೊಚ್ಚನೆಬ್ಬಿಸುವ ಸಾಹಿತ್ಯ ರಚನೆಯಿಂದ ಹೊರಬರುವ ಅನಿವಾರ್ಯ ನಿರ್ಮಾಣವಾಯಿತು. ಅದು ಪ್ರಗತಿಶೀಲ ಸಾಹಿತ್ಯಕ್ಕೆ ಕಾರಣವಾಯಿತು.

ಯಾವುದೇ ಸಾಹಿತ್ಯಕ ಬದಲಾವಣೆ ದಿಢೀರನೆ ಆ ಕ್ಷಣಕ್ಕೆ ಉದ್ಭವವಾಗುವುದಿಲ್ಲ. ಅದರ ಮೂಲ ಬೇರು ಪರಂಪರೆಯಲ್ಲಿಯೇ ಅಡಗಿರುತ್ತದೆ. ಸಮಯ ಕೂಡಿ ಬಂದಾಗ ಸ್ಫೋಟಗೊಂಡಾಗ ಬದಲಾವಣೆಗೆ ಕಾರಣವಾಗುತ್ತದೆ. ಪ್ರಗತಿಪರವಾಗಿ ಚಿಂತಿಸುವುದು ಮನುಷ್ಯನ ಮೂಲ ಸ್ವಭಾವವೇ ಆಗಿದೆ. ಆದಿಯ ಕಾಲದಿಂದಲೂ ಮನುಷ್ಯನ ಈ ಮೂಲ ಸ್ವಭಾವವು ಇಂದಿನ ಸಾಮಾಜಿಕ, ಸಾಂಸ್ಕೃತಿಕ ಸಾಹಿತ್ಯಿಕ ತಾಂತ್ರಿಕ ಎಲ್ಲಾ ಬಗೆಯ ಬದಲಾವಣೆಗೆ ಕಾರಣವಾಗಿವೆ. ಮನುಷ್ಯ ನಿರಂತರವಾಗಿ ಬದಲಾವಣೆಯನ್ನು ಅಪೇಕ್ಷಿಸುತ್ತಾನೆ. ಹಿಂದೆ ಇದ್ದಂತೆ ಇಂದು ಇಲ್ಲ ಇಂದು ಇದ್ದಂತೆ ಮುಂದೆಯೂ ಇರಲಾರ. ನಿತ್ಯ ಹೊಸ ತನಕ್ಕೆ ತುಡಿಯುವ ಮನುಷ್ಯನ ಮೂಲಗುಣವೇ ಇದಕ್ಕೆ ಕಾರಣ ಸಾಹಿತ್ಯ ಬದಲಾವಣೆಗೆ ಇದು ಒಂದು ಮುಖ್ಯವಾದ ಕಾರಣ ಅಂತಾ ಹೇಳಬಹುದು.

ಸಾಹಿತ್ಯ ವಿಕಾಸದಲ್ಲಿ ಪ್ರತಿಶೀಪರತೆ ಬಹುಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಏಕಪ್ರಕಾರದ ರಚನೆ ಬಹುಬೇಗ ಕ್ಲಿಷೆಯಾಗಬಹುದು ಪುನರಾಹರ್ತನೆಯಾಗಿ ಸಹೃದಯರನ್ನು ನಿರಾಶೆಗೆ ದೂಡಬಹುದು. ಹೊಸತನವನ್ನು ಅಪೇಕ್ಷಿಸುವುದು ಸಹಜ. ಸಮಾಜದ ಬದಲಾದ ವಿದ್ಯಮಾನದಿಂದ ಲೇಖಕ ವಿಮುಖನಾಗಲಾರ ಏಕೆಂದರೆ ಸಮಾಜವೇ ಸಮಸ್ತ ಬದಲಾವಣೆಗೆ ಕಾರಣೀಭೂತವಾಗಿರುತ್ತದೆ.

ಪಂಪನ ಕಾಲದಿಂದಲೂ ಸಾಹಿತ್ಯದ ಬದಲಾವಣೆಯ ಪ್ರಕ್ರಿಯೇ ನಿರಂತರವಾಗಿ ನಡೆಯುತ್ತಲೇ ಬಂದಿರುವುದು ಗಮನಾರ್ಹ ಮತ್ತು ಸಮಾಜದ ಚಲನೆ ಸಾಹಿತ್ಯದ ಮೇಲೆ ಪ್ರಭಾವ ಬೀರಿದಂತೆ ಕಲಾಕ್ಷೇತ್ರದ ಮೇಲೂ ಪ್ರಭಾವ ಬೀರುತ್ತದೆ. ಸಾಹಿತ್ಯ ಶಬ್ಧ ರೂಪದಲ್ಲಿ ಬದಲಾದ ಸಂದರ್ಭವನ್ನು ಅಭಿವ್ಯಕ್ತಿಸಿದರೆ ಕಲೆಯೂ ಕಲಾ ರೂಪದಲ್ಲಿ ಅಭಿವ್ಯಕ್ತಿಸುತ್ತದೆ. ಈ ಎರಡೂ ಕ್ಷೇತ್ರಗಳು ಪರಸ್ಪರ ಪ್ರಭಾವಕ್ಕೆ ಒಳಗಾಗುತ್ತಲೇ ಇರುತ್ತವೆ. ಪ್ರಗತಿಶೀಲತೆಯ ಪ್ರೇರಣೆ ಪ್ರಭಾವಗಳನ್ನೂ ಹುಡುಕಾಡುವ ಸಂದರ್ಭದಲ್ಲಿ ಈ ವಿಚಾರವನ್ನು ಕಡೆಗಣಿಸುವಂತಿಲ್ಲ. ಮಾರ್ಕ್ಸ್ ಆ್ಯಡೆರೇಟ್ ಕಲೆ ಮತ್ತು ಸಮಾಜದ ಸಂಬಂಧವನ್ನು ಕುರಿತು ಸುದೀರ್ಘವಾಗಿ ಬರೆದಿದ್ದಾರೆ. ಸಮಾಜವಿಲ್ಲದೆ ಕಲೆ ಜೀವಂತವಾಗಿರಲು ಸಾಧ್ಯವಿಲ್ಲವೆಂಬುದನ್ನು ಸ್ಪಷ್ಟಪಡಿಸಿದ್ದಾರೆ. ಹಾಗೆಯೇ ಸಾಹಿತ್ಯ ಮತ್ತು ಕಲೆಯ ನಿಕಟ ಸಂಬಂಧವನ್ನು ಸಮರ್ಥಿಸಿದ್ದಾರೆ ಅಂತಾ ಹೇಳಬಹುದು.

ಕರ್ನಾಟಕದ ಪ್ರಗತಿಶೀಲ ಸಂಘರ್ಷದ ವಿದೇಶಿಯ ಸಾಮಾಜಿಕ ಕ್ರಾಂತಿ ಮೂಲಕಾರರು ಇದು ನಿಜವಾದರೂ ಮನೋಭಾವ ಮಾತ್ರ ಪರಂಪರೆಯಿಂದಲೇ ಬಂದಿರುತ್ತದೆ. ಏಕೆಂದರೆ ಪ್ರಗತಿಶೀಲ ಮನೋಭಾವ ಮಾತ್ರ ಮನುಷ್ಯನ ಮೂಲ ಸ್ವಭಾವವೇ ಆಗಿದೆ ಎಂಬುದನ್ನು ಈ ಹಿಂದೆಯೇ ಸಮರ್ಥಿಸಲಾಗಿದೆ. ವಿದೇಶಿಯಲ್ಲಿ ವಿಶ್ಲೇಷಣಾತ್ಮಕ ಸಮಾಜವಾದ ಮತ್ತು ನೈಜವಾದಗಳು ಕ್ರಿಯಾಶೀಲವಾಗಿದ್ದವು. ಈ ಮೂರು ವಾದಗಳಲ್ಲಿ ಕನ್ನಡ ಸಾಹಿತ್ಯ ಪ್ರೇರಣೆ ಪಡೆದದ್ದು "ಉದಾರ ಮಾನವತಾವಾಗಿದೆ". ಈ ವಾದ ನೈಜನಶೀಲ ಲೇಖಕರಿಂದ ಬಯಸುವುದು ಜನಪರ ಬದಲಾವಣೆಯನ್ನು ತಮ್ಮ ಬರವಣೆಯಿಂದ ಸಮಾಜದಲ್ಲಿ ಪರಿವರ್ತನೆ ತರಲು ಪ್ರಯತ್ನಿಸುವುದು ಈ ವಾದದ ಉದ್ದೇಶವಾಗಿದೆ. ಈ ಸಂಘರ್ಷದ ಬೆಳವಣಿಗೆ ಐರೋಪ್ಯ ರಾಷ್ಟ್ರಗಳಲ್ಲಿ ನಡೆಯುತ್ತಿರುವ ಸಂದರ್ಭಗಳಲ್ಲಿ ಪ್ರಪಂಚದಲ್ಲಿ ವೈಜ್ಞಾನಿಕತೆ ವ್ಯಾಪಕವಾಗಿ ಹಿಡಿಯುತ್ತಿತ್ತು. ಇದರೊಂದಿಗೆ ಕೈಗಾರೀಕರಣ, ರಾಜಕೀಯ, ಧಾರ್ಮಿಕ ಸ್ಥಿತ್ಯಂತರಗಳಿಂದ ಬಡಂವಾಳಶಾಹಿ ವರ್ಗ ಮತ್ತು ಶ್ರಮಿಕವಗಳಾಗಿ ವಿಂಗಡನೆಯಾಯಿತು. ಬಂಡವಾಳಶಾಹಿ ವರ್ಗ ಶ್ರಮಿಕ ವರ್ಗ ಶ್ರಮದ ಗುರುಪಯೋಗದಿಂದ ಅಹಾರ ಧನವನ್ನು ಸಂಗ್ರಹಿಸಿ ಶ್ರೀಮಂತಿಕೆಯಿಂದ ಮರೆಯ ತೊಡಗಿದ್ದರು. ಶ್ರಮಿಕ ವರ್ಗ ಅಲ್ಪ ಆದಾಯದಲ್ಲಿ ಅನಿವಾರ್ಯವಾಗಿ ಜೀವನ ನಡೆಸಬೇಕಾಗಿತ್ತು ಬಂಡವಾಳಶಾಹಿಗಳ ಶೋಷಣೆಗೆ ಸಿಲುಕಿ ಬಡತನದಲ್ಲಿ ನಗಳುತ್ತಿದ್ದರು. ಇದರಿಂದ ಸಮಾಜದಲ್ಲಿ ಅಪಾರ ಅಸಮಾನತೆ ತಲೆಯೆತ್ತಿತ್ತು ಬಡತನ ಸಮಾಜದಲ್ಲಿ ತಾಂಡವಾಡ ತೊಡಗಿತು. ಈ ಎಲ್ಲಾ ಕಾರಣಗಳಿಂದ ವರ್ಗರಹಿತ ಸಮಾಜ ಕಟ್ಟಬೇಕೆಂಬ ಹಂಬಲ ಸಾಹಿತ್ಯಗಳು ಮತ್ತು ಸಾಮಾಜಿಕ ಚಿಂತಕರಲ್ಲಿ ದಟ್ಟವಾಗಿ ಸಂಘರ್ಷಕ ಮೂಡಿತು.

ಭಾರತದಲ್ಲಿ ಮೊದಲಿಗೆ ಉರ್ದು, ಹಿಂದಿ, ಬಂಗಾಳಿ ಭಾಷೆಗಳಲ್ಲಿ ಆರಂಭವಾದ ಪ್ರಗತಿಶೀಲ ಸಾಹಿತ್ಯ ಕ್ರಮೇಣ ಭಾರತದ ಎಲ್ಲಾ ರಾಷ್ಟ್ರೀಯ ಭಾಷೆಗಳಿಗೂ ಪ್ರಸರಿಸಿತು. ಅದರಲ್ಲಿ ಸಜ್ಜಾದ್ ಜಾಡೀರ್ ಅವರನ್ನು ಭಾರತೀಯ ಪ್ರಗತಿಶೀಲ ಸಾಹಿತ್ಯ ಚಳುವಳಿಯ

ಪ್ರವರ್ತಕರೆನ್ನಬಹುದು. ಅವರ ಜೊತೆ ೧೯೩೫ ರ ಆಸು ಪಾಸಿನಲ್ಲಿ ಮುಲ್ಕರಾಜ್ ಆನಂದ ಜೊತೆಗೂಡಿ ಪ್ರಗತಿಶೀಲ ಬರಹಗಾರರನ್ನು ಒಂದೆಡೆ ಸೇರಿಸಲು ಶ್ರಮಿಸಿದರು. ಈ ಹೊಸ ಸಮಾಜವಾದಿ ಸಿದ್ಧಾಂತ ಯುರೋಪಿನ ಫ್ಯಾಸಿಸ್ಟ್ ದಬ್ಬಾಳಿಕೆಯ ವಿರುದ್ಧ ಕೆಲಸ ಮಾಡಲು ಪ್ರಾರಂಭಿಸಿತು. ಬೂರ್ಜ್ವಾ ರಾಷ್ಟ್ರೀಯವಾದಿಗಳು ಈ ಫ್ಯಾಸಿಸ್ಟ್ ವಿರೋಧದಲ್ಲಿ ತೊಡಗಿದ್ದರು. ಯುರೋಪಿನಲ್ಲಿ ಬದಲಾದ ರಾಜಕೀಯ ಚಿಂತನೆ ಮಾರ್ಕ್ಸ್‌ವಾದಿ ಹೋರಾಟಕ್ಕೆ ಎಡೆಮಾಡಿಕೊಟ್ಟಿತು. ಆ ಸಂದರ್ಭದಲ್ಲಿ ಸಜ್ಜಾದ್ ಮುಲ್ಕ್‌ರಾಜ್ ಆನಂದ್ ಮುಂತಾದವರು ಸೇರಿ ವಿಶ್ವ ಪ್ರಗತಿಶೀಲ ಸಾಹಿತಿಗಳ ಸಂಘ ರಚಿಸಿದರು. ಇದೇ ಪ್ರಗತಿಶೀಲ ಸಾಹಿತ್ಯ ಚಳುವಳಿಗೆ ಬುನಾದಿಯಾಯಿತು.

ಇದರ ಪರಿಣಾಮವು ಭಾರತೀಯರಾದ ಸಜ್ಜಾದ್ ಜಾಹೀರ್ ಮಲ್ಕರಾಜ್ ಆನಂದ್ ಪ್ರಗತಿಶೀಲ ಸಾಹಿತ್ಯ ಸಂಘರ್ಷದ ಚಳುವಳಿಯನ್ನು ಕಟ್ಟಿ ಬೆಳೆಗಿದರು. 'ಅಖಿಲ ಭಾರತ ಪ್ರಗತಿಶೀಲ ಲೇಖಕರ ಸಂಘದ ಮೊದಲ ಅಧಿವೇಶನವನ್ನು ೧೯೩೬ ರಲ್ಲಿ ಲಖ್ನೋದಲ್ಲಿ ಏರ್ಪಡಿಸಿದರು. ಹಿಂದಿ ಲೇಖಕ ಪ್ರೇಮ್‌ಚಂದ್ ಈ ಸಮ್ಮೇಳನದ ಆಧ್ಯಕ್ಷತೆ ವಹಿಸಿದ್ದರು. ಅನಂತರ ದೆಹಲಿ, ಕೋಲ್ಕತ್ತಾಗಳಲ್ಲಿ ಅಧಿವೇಶನಗಳು ಜರುಗಿದವು. ತದನನಂತರ ಪ್ರಗತಿಶೀಲ ಸಾಹಿತ್ಯ ಚಳುವಳಿ ಉದಯವಾಗುವ ಮುನ್ನವೇ ಪ್ರಗತಿಪರ ಆಶಯಗಳನ್ನು ಬಿಂಬಿಸಿ ಹಿಂದಿಯಲ್ಲಿ ಬರೆಯುತ್ತಿದ್ದ ಪ್ರೇಮ್‌ಚಂದ್ ಶರತ್‌ಚಂದ್ ಅವರಿಗೆ 'ಪ್ರಗತೀಶೀಲ ಸಾಹಿತ್ಯ ಚಳುವಳಿಯ' ಒಂದು ಒಳ್ಳೆಯ ವೇದಿಕೆಯಾಯಿತು.

ಹೀಗೆ ಕರ್ನಾಟಕದಲ್ಲಿ ಅ.ನ.ಕೃ. ತ.ರಾ.ಸು. ಕಟ್ಟಿಮನಿ, ನಿರಂಜನ ಈ ಸಾಹಿತ್ಯದಲ್ಲಿ ಗುರುತಿಸಿಕೊಂಡರು. ಹಿಂದಿ, ಬಂಗಾಳಿ ಭಾಷೆಗಳ ಪ್ರಗತಿಶೀಲ ಲೇಖಕರ ಕೃತಿಗಳನ್ನು ಕನ್ನಡಕ್ಕೆ ಭಾಷಾಂತರಿಸುವ ಕೆಲಸವನ್ನು ನಿರಂಜನ ಮೊದಲಾದ ಕನ್ನಡ ಪ್ರಗತಿಶೀಲ ಲೇಖಕರು ಮಾಡಿದರು. ಹೊಸ ಕಾಲಕ್ಕೆ ಹೊಸ ಸಾಹಿತ್ಯದ ಉದಯ ಕನ್ನಡದಲ್ಲೂ ಆಯಿತು. ಅ.ನ.ಕೃ. ಅವರ 'ನಗ್ನಸತ್ಯ' ತ.ರಾಸು. ಅವರ 'ಮಸಣದ ಹೂ' ಕಟ್ಟಿಮನಿ ಅವರ ಜ್ವಾಲಾಮುಖಿಯ ಮೇಲೆ ನಿರಂಜನರ ಚಿರಸ್ಮರಣೆ ಕೃತಿಗಳು ಆ ಕಾಲಕ್ಕೆ ಬಂದ ಹೊಸ ದೃಷ್ಟಿಕೋನದ ಪ್ರಗತಿಶೀಲ ಕಥೆ–ಕಾದಂಬರಿಗಳಾಗಿ ಹೊರಹೊಮ್ಮಿದವು.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಹಲವಾರು ಪಂಥಗಳು ಜನ್ಮತಾಳಿದವು. ಅವು ಕಾಲದಲ್ಲಿ ಸಾಹಿತ್ಯವಾಹಿನಿಗೆ ಹೊಸಧಾರೆಯನ್ನೂ ಸೇರ್ಪಡೆ ಮಾಡಿ ಮರೆಯಾಗಿದೆ. ನವೋದಯ, ನವ್ಯ ದಲಿತ ಬಂಡಾಯ, ದಲಿತ ವರ್ಗ ಹಾಗೇ ಪ್ರಗತಿಶೀಲ ಚಳುವಳಿಯು ಮರೆಯಾದ ಒಂದು ಧಾರೆ. ಪ್ರಗತಿಶೀಲ ಚಳುವಳಿಯು ಕ್ಷೀಣಿಸಲು ಹಲವಾರು ಕಾರಣಗಳನ್ನೂ ವಿದ್ವಾಂಸರು ಗುರುತಿಸಿದ್ದಾರೆ.

- ಸೃಜನಶೀಲತೆಯ ಕೊರತೆ
- ಸೈದ್ಧಾಂತಿಕ ಭಿನಾಪ್ರಭಿಪ್ರಾಯ
- ಗಾಂಧಿವಾದದ ಪ್ರಭಾವ

ಹೀಗೆ ಪ್ರಗತಿಶೀಲ ಸಾಹಿತ್ಯದ ಚಳುವಳಿಯ ಸಾಧನೆಯನ್ನು ಅಲ್ಲಗಳೆಯಲಾಗುವುದಿಲ್ಲ. ಪ್ರಗತಿಶೀಲ ಚಳುವಳಿ ಎಂಬ ಹೆಸರು ಕಣ್ಮರೆಯಾದರೂ ಅವರ ತಾತ್ವಿಕ ಚಿಂತನೆಗಳು ಬೇರೊಂದು ರೂಪದಲ್ಲಿ ಇಂದಿಗೂ ನಮ್ಮ ಸಾಹಿತ್ಯದಲ್ಲಿ ಮುಂದುವರೆದಿದೆ. ನವ್ಯ ಸಾಹಿತ್ಯ ದಲಿತ–ಬಂಡಾಯ ದಲಿತ ಸಾಹಿತ್ಯದ ಸಂದರ್ಭದಲ್ಲಿ ಪ್ರಗತಿಪಥದ ಚಿಂತನೆ ಮುಂದುವರೆಯುತ್ತಿದೆ. ಸಮಾನತೆಯ ಚಿಂತನೆ ಲಕ್ಷಣಕ್ಕೆ ಹುಟ್ಟಿ ಮರೆಯಾಗುವಂತಹದಲ್ಲ. ಮಾನವಲೋಕದಲ್ಲಿ ಸರ್ವಸಮಾನತೆ ಪ್ರಾಪ್ತವಾಗುವವರೆಗೂ ಒಂದಲ್ಲ ಒಂದು ರೂಪದಲ್ಲಿ ಮುಂದುವರೆಯುತ್ತಲೇ ಇರುತ್ತದೆ ಅಂತಾ ಪ್ರಗತಿಶೀಲ ಕಥೆಗಳಲ್ಲಿ ಸಾಂಸ್ಕೃತಿಕ ಸಂಘರ್ಷವು ಕನ್ನಡ ಸಾಹಿತ್ಯದಲ್ಲಿ ಅಜರಾಮರವಾಗಿ ಉಳಿದಿದೆ.

## ಗ್ರಂಥಗಳ ಋಣ


೧. ತ.ರಾ.ಸು. ಅವರ ಸಮಗ್ರ ಸಣ್ಣ ಕಥೆಗಳು
೨. ಸಾಂಸ್ಕೃತಿಕ ಅಧ್ಯಯನ "ರಹಮತ್ ತರೀಕೆರೆ"
೩. ಪ್ರಗತಿಶೀಲ ಸಾಹಿತ್ಯ "ಡಾ. ರಣಧೀರ"
೪. ಕಥೆ ಮತ್ತು ಕಥಾವಸ್ತು "ಎಸ್.ಎಲ್. ಭೈರಪ್ಪ"
5. ನಿರಂಜರನ ಕೆಲವು ಸಣ್ಣ ಕತೆಗಳು ನಿರಂಜನ "ನಿರಂಜನ"